ಪ್ರಜಾವಾಣಿ

### ಅಖಿಲ ಭಾರತ ಅಂತರ ವಿ.ವಿ. ಈಜು ಚಾಂಪಿಯನ್‌ಷಿಪ್; ಮಿಂಚಿದ ಪೂರ್ವಾ

# ಮೀನಾಕ್ಷಿಗೆ ಎರಡು ಬಂಗಾರ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಜೈನ್ ವಿಶ್ವವಿದ್ಯಾಲಯದ ವಿ.ಕೆ.ಆರ್. ಮೀನಾಕ್ಷಿ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಎರಡು ಬಂಗಾರದ ಪದಕಕ್ಕೆ ಕೊರಳೊಡ್ಡಿದರು.

ಜೈನ್ ವಿ.ವಿ. ಕ್ಯಾಂಪಸ್‌ನ ಈಜುಗೊಳದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ದಿನ ಮಹಿಳೆಯರ 200ಮೀ. ಫ್ರೀಸ್ಟೈಲ್ ಮತ್ತು 400 ಮೀ. ವೈಯಕ್ತಿಕ ಮೆಡ್ಲೆ ವಿಭಾಗಗಳಲ್ಲಿ ಅವರು ಈ ಸಾಧನೆ ಮಾಡಿದರು.

400 ಮೀ. ವೈಯಕ್ತಿಕ ಮೆಡ್ಲೆ ವಿಭಾಗದಲ್ಲಿ ಐದು ನಿಮಿಷ 21.13 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಮೂಲಕ ಬೆಳಗಾವಿಯ ವಿಟಿಯುನ ಪೂಜಾ ಆಳ್ವಾ ಹೆಸರಿನಲ್ಲಿದ್ದ (5:25.89ಸೆ) ಮೂರು ವರ್ಷಗಳ ಹಿಂದಿನ ದಾಖಲೆಯನ್ನು ಅಳಿಸಿ ಹಾಕಿದರು.

ಜೈನ್ ವಿ.ವಿ.ಯ ಪೂರ್ವಾ ಶೆಟ್ಟಿ (5:41.35ಸೆ.) ಮತ್ತು ಕಲ್ಲಿಕೋಟೆ ವಿಶ್ವವಿದ್ಯಾಲಯದ ಅಂಜನಾ ಮೋಹನ್ (5:43.56ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ತಮ್ಮದಾಗಿಸಿಕೊಂಡರು. ಮೀನಾಕ್ಷಿ ಮೊದಲ ದಿನವಾದ ಭಾನುವಾರ ನಡೆದ 50ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ರಜತ ಪದಕ ಗೆದ್ದುಕೊಂಡಿದ್ದರು.

**ಅಮನ್‌ಗೆ ಚಿನ್ನ:** ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪಾಲ್ಗೊಂಡ ಅನುಭವ ಹೊಂದಿರುವ ಗುರುನಾನಕ್ ದೇವ್ ವಿ.ವಿ.ಯ ಅಮನ್ ಘಾಯ್ ಪುರುಷರ ವಿಭಾಗದ 200 ಮೀ. ಫ್ರೀಸ್ಟೈಲ್‌ನಲ್ಲಿ ಎರಡು ನಿಮಿಷ 00.61ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ತಮ್ಮದಾಗಿಸಿಕೊಂಡರು.

50ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಪಂಜಾಬ್ ವಿಶ್ವವಿದ್ಯಾಲಯದ ಜಶನ್‌ದೀಪ್ ಸಿಂಗ್ 29.83 ಸೆಕೆಂಡುಗಳಲ್ಲಿ ಗುರಿ ಸೇರಿ ಸ್ವರ್ಣದ ಸಾಧನೆ ತೋರಿದರು.

**ಸೋಮವಾರದ ಫಲಿತಾಂಶಗಳು:** ಪುರುಷರ ವಿಭಾಗ: 50ಮೀ. ಬ್ರೆಸ್ಟ್‌ಸ್ಟ್ರೋಕ್: ಜಶನ್‌ದೀಪ್ ಸಿಂಗ್ (ಪಂಜಾಬ್ ವಿ.ವಿ, ಕಾಲ: 29.83ಸೆ)–1, ಪುನೀತ್ (ದೇವಿಲಾಲ್ ವಿ.ವಿ, ಕಾಲ: 30.61ಸೆ.)–2, ಅಮನ್ ಘಾಯ್ (ಗುರುನಾನಕ್ ವಿ.ವಿ. ಕಾಲ: 31.34ಸೆ)–3.

200 ಮೀ. ಫ್ರೀಸ್ಟೈಲ್: ಅಮನ್ ಘಾಯ್ (ಗುರುನಾನಕ್ ವಿ.ವಿ, 2:00.61ಸೆ)–1, ಸಂಜಯ್ ರಾಜ್ (ವಿ.ಎಸ್.ಎಸ್.ಜಿ, 2:01.43ಸೆ.)–2, ಯೋಗೇಶ್ ಕುಮಾರ್ (ಎಂ.ಎ.ಎಸ್, 2:02.11ಸೆ)–3.

400ಮೀ. ವೈಯಕ್ತಿಕ ಮೆಡ್ಲೆ: ಎಂ.ಅರವಿಂದ್ (ವಿಟಿಯು, 4:45.86ಸೆ)–1, ವಿರಾಜ್ ಧೋಕಲೆ (ಸಾವಿತ್ರಿಬಾಯಿ ಫುಲೆ ವಿ.ವಿ, 4:57.84ಸೆ)–2, ಸಂಜಯ್ ರಾಜ್ (ವಿ.ಎಸ್.ಎಸ್.ಜಿ, 4:58.38)–3.

ಡೈವಿಂಗ್: ಪ್ಲೆ ಬೋರ್ಡ್: ಗೌರವ್ ರಘುವಂಶಿ (ಡಿ.ಎ.ವಿ.ವಿ, 239.20)–1, ಕೇತನ್ ಶಿಂಧೆ (ಎಂ.ಯು.ಎಸ್, 205.15)–2, ಉದಿತ್ ಮಿಶ್ರಾ (ಎಲ್.ಯು.ಕೆ, 178.30)–3.

ಮಹಿಳೆಯರ ವಿಭಾಗ: 50ಮೀ. ಬ್ರೆಸ್ಟ್‌ಸ್ಟ್ರೋಕ್: ಪೂರ್ವಾ ಶೆಟ್ಟಿ (ಜೈನ್ ವಿ.ವಿ, 36.41ಸೆ.)–1, ಪ್ರಿಯಾಂಕಾ (ದೆಹಲಿ ವಿ.ವಿ, 36.81ಸೆ)–2, ದಿವ್ಯಾ ಗುರುಸ್ವಾಮಿ (ವಿಟಿಯು, 38.14ಸೆ)–3.

200ಮೀ. ಫ್ರೀಸ್ಟೈಲ್: ವಿ.ಕೆ.ಆರ್. ಮೀನಾಕ್ಷಿ (ಜೈನ್ ವಿ.ವಿ 2:15.09ಸೆ)–1, ಟಿ.ಸ್ನೇಹಾ (ಆರ್.ಜಿ.ಯು.ಎಚ್.ಎಸ್, 2:17.15ಸೆ)–2, ಎಸ್.ಸಂಧ್ಯಾ (ಕೇರಳ ವಿ.ವಿ, 2:19.05ಸೆ)–3.

400 ಮೀ.ಮೆಡ್ಲೆ : ವಿ.ಕೆ.ಆರ್. ಮೀನಾಕ್ಷಿ (5:21.13ಸೆ)–1, ಪೂರ್ವಾ ಶೆಟ್ಟಿ (5:41.35ಸೆ)–2 (ಇಬ್ಬರೂ ಜೈನ್ ವಿ.ವಿ), ಅಂಜನಾ ಮೋಹನ್ (ಸಿಯು, 5:43.56ಸೆ)–3.

800ಮೀ. ಫ್ರೀಸ್ಟೈಲ್: ಟಿ.ಸ್ನೇಹಾ (ಆರ್.ಜಿ.ಯು.ಎಚ್.ಎಸ್, 9:59.00ಸೆ)–1, ಪ್ರತಿಮಾ ಕೊಲ್ಹಾರ (ಬೆಂಗಳೂರು ವಿ.ವಿ 10:03.46ಸೆ)–2, ಪೂರ್ವಾ ಶೆಟ್ಟಿ (ಜೈನ್.ವಿ.ವಿ, 10:24.12ಸೆ)–3.

ಡೈವಿಂಗ್: ಪ್ಲೆ ಬೋರ್ಡ್: ಸ್ವಾತಿ ವಿರಾಜ್ (ಎಸ್.ಟಿ.ಎಲ್, 147.50)–1, ತನುಜಾ ಧಾರಾ (ಸಿಯು, 141.35)–2, ಗಾರಿಮಾ ಕಪೂರ್ (ಆರ್.ಎಂ.ಎಲ್.ಎಸ್. ಎಲ್.ಯು, 122.85)–3.



ಬೆಂಗಳೂರಿನಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿ.ವಿ ಈಜು ಚಾಂಪಿಯನ್‌ಷಿಪ್‌ನ ಮಹಿಳೆಯರ 200 ಮೀ. ಫ್ರೀಸ್ಟೈಲ್ ಮತ್ತು 400 ಮೀ. ವೈಯಕ್ತಿಕ ಮೆಡ್ಲೆ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡ ಜೈನ್ ವಿಶ್ವವಿದ್ಯಾಲಯದ ಮೀನಾಕ್ಷಿ ಸಂಭ್ರಮಿಸಿದ ಕ್ಷಣ –ಪ್ರಜಾವಾಣಿ ಚಿತ್ರ